# ಇಲಾಖಾ ಪರಿಚಯ

ಪ್ರಾಚೀನ ಕಾಲದಿಂದಲೂ ಮಾನವನು ವ್ಯವಸಾಯ ಹಾಗೂ ಆಹಾರಕ್ಕಾಗಿ ಜಾನುವಾರುಗಳ ಮೇಲೆ ಸಂಪೂರ್ಣವಾಗಿ ಅವಲಂಬಿತನಾಗಿದ್ದಾನೆ. ಜಾನುವಾರುಗಳ ಆರೋಗ್ಯ ಹಾಗೂ ಅವುಗಳ ಅಧಿಕ ಉತ್ಪಾದನೆಯು ಅತ್ಯಂತ ಅವಶ್ಯಕವಾಗಿದ್ದು, ಇವುಗಳ ಸಂರಕ್ಷಣೆಗಾಗಿ ಪ್ರತ್ಯೇಕ ವ್ಯವಸ್ಥೆಯ ಅಸ್ಥಿತ್ವ ಹಿಂದಿನಿಂದಲೂ ಕಂಡು ಬರುತ್ತದೆ.

ನಮ್ಮ ರಾಜ್ಯದಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಚಟುವಟಿಕೆಗಳು ಅಮೃತ್‌ಮಹಲ್ ತಳಿಯ ಉಗಮದೊಂದಿಗೆ 1572 ರಲ್ಲಿ ಆರಂಭವಾದವು. ಮೈಸೂರು ಸಂಸ್ಥಾನದ ಅರಸರಾಗಿದ್ದ ಶ್ರೀ ಚಿಕ್ಕ ದೇವರಾಜ ಒಡೆಯರ್ (ಕ್ರಿ.ಶ 1672-1704)ರವರ ಕಾಲದಲ್ಲಿ ಇದನ್ನು "ಬೆಣ್ಣೆ ಚಾವಡಿ" ಎಂದು ಕರೆಯಲಾಗುತ್ತಿದ್ದು, ಶ್ರೀ ಟಿಪ್ಪು ಸುಲ್ತಾನರ ಕಾಲದಲ್ಲಿ "ಅಮೃತ್‌ಮಹಲ್" ಎಂದು ಪುನರ್ ನಾಮಕರಣಗೊಂಡು, ಮೈಸೂರು ಅರಮನೆಗೆ ಇಲ್ಲಿಂದಲೇ ಹಾಲು, ಮೊಸರು, ಬೆಣ್ಣೆ, ತುಪ್ಪಗಳ ಸರಬರಾಜು ಆಗುತ್ತಿತ್ತು. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ (ಕ್ರಿ.ಶ. 1866) ಅಮೃತ್‌ಮಹಲ್ ಇಲಾಖೆಯು ಪುನ:ಶ್ಚೇತನಗೊಂಡಿತು.

ಕ್ರಿ.ಶ. 1868 ರಲ್ಲಿ ಭಾರತದ ವೈಸರಾಯರಾಗಿದ್ದ ಲಾರ್ಡ್ ಮೇಯೋರವರು ಭಾರತದಲ್ಲಿ ಜಾನುವಾರು ರೋಗಗಳು, ಅವುಗಳ ನಿವಾರಣೋಪಾಯ ಮತ್ತು ಚಿಕಿತ್ಸೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ವರದಿ ನೀಡಲು ಆಯೋಗವೊಂದನ್ನು ನೇಮಿಸಿದ್ದು, ಈ ಆಯೋಗವು ಪಶುವೈದ್ಯಕೀಯ ಸೇವೆಗಳ ಸ್ಥಾಪನೆಗೆ ಅನುವು ಮಾಡಿಕೊಟ್ಟಿತು.

ಕ್ರಿ.ಶ. 1920 ರಲ್ಲಿ ಈ ಅಮೃತ್ ಮಹಲ್ ಇಲಾಖೆಯನ್ನು ರಾಜ್ಯದ ಕೃಷಿ ಇಲಾಖೆ, ನಿರ್ದೇಶಕರ ಅಧಿಕಾರಕ್ಕೆ ಸೇರಿಸಲಾಯಿತು. ಕ್ರಿ.ಶ. 1945ರಲ್ಲಿ ಇದನ್ನು ಕೃಷಿ ಇಲಾಖೆಯಿಂದ ಬೇರ್ಪಡಿಸಿ ಹೊಸದಾಗಿ ಆರಂಭವಾದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳ ನಿರ್ದೇಶಕರ ಆಡಳಿತ ವ್ಯಾಪ್ತಿಗೆ ಒಳಪಡಿಸಲಾಯಿತು.

ಜಾನುವಾರುಗಳ ಭಯಂಕರ ರೋಗವಾದ ದೊಡ್ಡರೋಗ ನಿಯಂತ್ರಣಕ್ಕಾಗಿ ಕ್ರಿ.ಶ. 1926 ರಲ್ಲಿ ವೈರಸ್ ಡಿಪೋ ಪ್ರಾರಂಭಿಸಲ್ಪಟ್ಟ ನಂತರ ಈ ಸಂಸ್ಥೆ "ಮೈಸೂರು ಸೀರಂ ಇನ್‌ಸ್ಟಿಟ್ಯೂಟ್" (ಈಗಿನ "ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ) ಜಾನುವಾರುಗಳ ವಿವಿಧ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕಾಗಿ ವಿವಿಧ ಲಸಿಕೆಗಳನ್ನು ತಯಾರಿಸುತ್ತಿದೆ.

ಕ್ರಿ.ಶ. 1958ರವರೆಗೆ ರಾಜ್ಯದಲ್ಲಿ ಪಶುವೈದ್ಯಕೀಯ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದಿದ್ದುದರಿಂದ, ಈ ಇಲಾಖೆಗೆ ಬೇಕಾದ ತಾಂತ್ರಿಕ ಸಿಬ್ಬಂದಿಗಳಿಗಾಗಿ ಸರ್ಕಾರವು ಪ್ರತಿ ವರ್ಷವೂ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಹೊರ ರಾಜ್ಯಗಳಿಗೆ ವಿದ್ಯಾಭ್ಯಾಸಕ್ಕಾಗಿ ಪದವಿ/ಡಿಪ್ಲೊಮೋಗಳನ್ನು ಪಡೆಯಲು ಕಳುಹಿಸಿ, ಸದರಿ 9 ಅಭ್ಯರ್ಥಿಗಳನ್ನು ವಿದ್ಯಾಭ್ಯಾಸದ ನಂತರ ರಾಜ್ಯದಲ್ಲಿನ ಇಲಾಖೆಯ ಸೇವೆಗೆ ನೇಮಕಾತಿ ಮಾಡಲಾಗುತ್ತಿತ್ತು.

ಕ್ರಿ.ಶ. 1958ರಲ್ಲಿ ರಾಜ್ಯದಲ್ಲಿ ಪ್ರಥಮ ಪಶುವೈದ್ಯಕೀಯ ಕಾಲೇಜು ಬೆಂಗಳೂರಿನಲ್ಲಿ ಸ್ಥಾಪನೆಗೊಂಡು ಇಲಾಖೆಗೆ ಬಹುಪಾಲು ಪಶುವೈದ್ಯರನ್ನು ಒದಗಿಸುತ್ತಿದೆ. ಕ್ರಿ.ಶ. 1985 ರಲ್ಲಿ ಬೀದರ್‌ನಲ್ಲಿ ಮತ್ತೊಂದು ಪಶುವೈದ್ಯಕೀಯ ಕಾಲೇಜು ಸ್ಥಾಪನೆಗೊಂಡಿದೆ. ನಂತರದ ವರ್ಷಗಳಲ್ಲಿ ಶಿವಮೊಗ್ಗ(2006), ಹಾಸನ(2007), ಗದಗದಲ್ಲಿ (2017)ಕಾಲೇಜು ಪ್ರಾರಂಭಿಸಲಾಗಿದೆ. ಅಥಣಿ (ಬೆಳಗಾವಿ ಜಿಲ್ಲೆ) ಮತ್ತು ಪುತ್ತೂರು (ಕೊಯ್ಲಾ, ದಕ್ಷಿಣ ಕನ್ನಡ ಜಿಲ್ಲೆ) ಗಳಲ್ಲಿ ನೂತನ ಪಶುವೈದ್ಯಕೀಯ ಕಾಲೇಜು ನಿರ್ಮಾಣಗೊಳ್ಳುತ್ತಿದೆ.